
ಪದಬಂಧ



ಎಡದಿಂದ ಬಲಕ್ಕೆ :

1. ಇದೆಂಥ ವ್ಯತ್ಯಾಸ ? ಕಿಂಚಿತ್ತೂ ಹೆಚ್ಚು ಕಡಿಮೆ ಇಲ್ಲ (4)
3. ವೇದವಿದರ ನಡುವೆ ಏನೋ ಭಿನ್ನಾಭಿಪ್ರಾಯದ ಚರ್ಚೆ (3)
4. ಹಾನಿಯಾಗಲು ಕಾರಣವಾದವನ ಸ್ಥಿತಿ ತುಂಬ ಕೀಳು (3)
6. ವಿಕ್ರಮವನ್ನು ದಾಖಲಿಸುವಲ್ಲಿ ಹೊಸದೊಂದು ರೀತಿ (4)
7. ಪಾಸಾಯಿತೆಂದು ಸಂಭ್ರಮಿಸಲು ಹಬ್ಬದ ಸಿಹಿ ಪೇಯ (3)
9. ಏನೇ ಕೊಳ್ಳುವಾಗಲೂ ಒಂದು ರೀತಿಯ ಯುದ್ಧ (3)
11. ಕೊಂಡು ತಂದಾಗ ಹೇಗಿತ್ತು ? ಇದು ಭಾರೀ ಕೈ ಬಳೆ (3)
13. ನಾರಿಯರಿಗೆ ಪ್ರಿಯ ಈ ಶಹರ (3)
15. ಅವನಿಗೇ ಮಸಿ ಹತ್ತುವಂತಾಯಿತು ಬರೀ ಸುಳ್ಳು ನುಡಿ (4)
17. ಮಾರಲೆಂದು ತಂದಿರುವುದು ಸುಂದರ ಮುಂಡಾಸು (3)
18. ಪಂಡಿತರ ಮಧ್ಯೆ ಹೇಗೆ ಸೇರಿದ ಈ ಅಜ್ಞಾನಿ ? (3)
19. ಸಾಧಾರಣ ಕೆಲಸದವರ ಸ್ಥಿತಿ ಉತ್ತಮಪಡಿಸಿದ್ದು ಈಕೆಯೇ (4)

ಮೇಲಿಂದ ಕೆಳಕ್ಕೆ :

1. ಸಕಲ ಸಾಧನೆಗಳಿಗೂ ನೆಲೆಯಾದದ್ದು ಇದೇ ಮನೆ (3)
2. ರಾಮನ ಮಿತ್ರ ಈ ಮುಸ್ಲಿಮ (3)
3. ಸಮಯವೆಂಬುದು ನಿಜವಾಗಿ ಭಾರೀ ಸೋಜಿಗ (3)
5. ಮಳೆಯಲ್ಲಿ ನೆನೆಯುತ್ತಲೇ ಸಾಗಿರುವ ಜೋಡಿ ನೋಡಿ (3)
7. ಸರ್ವ ವಿಧ ಪತನಕ್ಕೂ ಕಾರಣವಾದ ಮಹಾ ಪಾಪಕಾರ್ಯ (3)
8. ಸುರಂಗ ಮಾರ್ಗದಲ್ಲಿ ಓಡಾಟ ತುಂಬ ಸಲೀಸು (3)
9. ನಾನಾ ಕಾರಣಗಳಿಂದ ನಾಶವಾಗುತ್ತಿದೆ, ಕಾಡು (3)
10. ಗಟ್ಟಿ ಇರದವರು ಜಾರಿ ಬಿದ್ದದ್ದು ಇದೇ ಮೋರಿ (3)
12. ಮಾಡಿರುವುದಾದರೂ ಹೇಗೆ ? ಶಿವನ ಕೈ ವಾದ್ಯ (3)
14. ಯಾವ ಮಾರ್ಗವನ್ನೂ ತಿಳಿದಿಲ್ಲ , ಮಹಾ ಪೆದ್ದ (3)
15. ಚೆನ್ನಾಗಿ ಸಲಹಿದ್ದಕ್ಕೆ ಈ ಸಮೃದ್ಧಿ (3)
16. ಪಾತಕವನ್ನೆಸಗಲು ಕಾರಣ ಇದೇ ಬಂದೂಕು (3)

## 300616 ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಮಾರೋಪ 3. ಅಪೂರ್ವ 4. ತಿಲ್ಲಾನ 6. ಸ್ವರಚಿತ 7. ಅನುದಿನ 9. ಬಲಯುತ 11. ಸುಮಧುರ 13. ಲತಾಕುಂಜ 15. ಸರ್ವನಾಮ 17. ಣರಹ ( = ಹರಣ ಹಿಂದುಮುಂದು ) 8. ದಿಬ್ಬಣ 9. ನೆಡುತೋಪು

ಮೇಲಿಂದ ಕೆಳಕ್ಕೆ :

1. ಸರ್ವಸ್ವ 2. ಪತಿತ 3. ಅನಾದಿ 5. ನಕುಲ 7. ಅಡಗಿಸು 8. ನಮಸ್ಕಾರ 9. ಬರಗಾಲ 10. ತರಿರ್ಜಜ ( = ಜರ್ಜರಿತ ತಲೆಕೆಳಗು) 12. ಧುರೀಣ 14. ತಾರಣ 15. ಸಹನೆ 16. ಮದಿಪು

## ಪ್ರಶ್ನಾಂಕಣ

# ನೆಲದ ಮೇಲೆ ತಿಮಿಂಗಿಲ ಬದುಕುವುದಿಲ್ಲ ಏಕೆ ?

ತಿಮಿಂಗಿಲ ಅದು ಸ್ತನಿ ವರ್ಗದ ಪ್ರಾಣಿ ; ಬಿಸಿ ರಕ್ತ ಶರೀರಿ. ಸಂಪೂರ್ಣ ಸಾಗರವಾಸಿಗಳೇ ಆಗಿದ್ದರೂ ಮೀನುಗಳಂತಲ್ಲದೆ ತಿಮಿಂಗಿಲಗಳು ( ಚಿತ್ರ 2 ) ನೇರವಾಗಿ ಗಾಳಿಯನ್ನೇ ಉಸಿರಾಡುತ್ತವೆ. ಹಾಗಿದ್ದರೂ ನೆಲಕ್ಕೆ ಬಿದ್ದ ತಿಮಿಂಗಿಲಗಳು ಸ್ವಲ್ಪ ಕಾಲದಲ್ಲೇ ಪ್ರಾಣ ಬಿಡುತ್ತವೆ ( ಚಿತ್ರ 1 ). ಹಾಗಾಗುವುದು ಏಕೆ ?

ನಿಮಗೇ ತಿಳಿದಿರುವಂತೆ ತಿಮಿಂಗಿಲಗಳದು ಬೃಹದಾಕಾರ ; ಹತ್ತಾರು ಟನ್ ಗಳಿಂದ ನೂರು ಟನ್ ಮೀರುವ ತೂಕ. ಅವುಗಳ ಚರ್ಮದ ಕೆಳಗೆ ಇಡೀ ಶರೀರವನ್ನು ಆವರಿಸಿದ ದಪ್ಪನಾದ ಕೊಬ್ಬಿನ ಪದರ ಬೇರೆ ಕಡಲಲ್ಲಿ ಶೀತದಿಂದ ಕಾಪಾಡಲು ಮತ್ತು ಬೃಹದ್ದೇಹಕ್ಕೆ ನೀರಲ್ಲಿ 'ತೇಲು ಬಲ' ನೀಡಲು ಅವಕ್ಕೆ ಈ ಕೊಬ್ಬಿನ ಕವಚ ನಿಸರ್ಗದತ್ತ . ಆದರೆ ನೆಲದ ಮೇಲೆ ಊರಬಹುದಾದ, ಒತ್ತಿ ಚಲಿಸಬಹುದಾದ ಯಾವುದೇ ಅಂಗವೂ ತಿಮಿಂಗಿಲಗಳಿಗಿಲ್ಲ. ಭಾರೀ ಗಾತ್ರ ತೂಕ ಗಳಿಂದಾಗಿ ನೆಲದ ಮೇಲೆ ತೆವಳುವುದಾಗಲೀ, ಹೊರಳಾಡುವುದಾಗಲೀ ಇರಲಿ , ಕೇವಲ ಅತ್ತಿತ್ತ ಅಲುಗಾಡುವುದೂ ಅವಕ್ಕೆ ಸಾಧ್ಯ ಇಲ್ಲ . ಈ ಬಗೆಯ ಶರೀರ ರಚನೆಯೇ ತಿಮಿಂಗಿಲಗಳು ನೆಲದ ಮೇಲೆ ಬದುಕಲು ಸಾಧ್ಯವಾಗದ್ದಕ್ಕೆ ಕಾರಣ. ಹೇಗೆಂದು ನೀವೇ ಗಮನಿಸಿ .

* ವಿಪರೀತ ಭಾರದಿಂದಾಗಿ ಸಹಜವಾಗಿಯೇ ಗಟ್ಟಿ ನೆಲದ ಮೇಲೆ ತಿಮಿಂಗಿಲಗಳ ಇಡೀ ಶರೀರ ಸ್ವ ತೂಕದಿಂದಲೇ ಅದುಮಲ್ಪಡುತ್ತದೆ. ಎಷ್ಟೆಂದರೆ ಅವುಗಳ ಶರೀರದೊಳಗಿನ ಎಲ್ಲ ಅಂಗಾಂಗಗಳೂ ಅತ್ಯಂತ ಮುಖ್ಯವಾಗಿ ಶ್ವಾಸಕೋಶಗಳು ಬಲವಾಗಿ ಒತ್ತಲ್ಪಟ್ಟು ಉಚ್ಛ್ವಾಸ ನಿಶ್ವಾಸ ಅಸಾಧ್ಯವಾಗಿ ತಿಮಿಂಗಿಲದ ಉಸಿರಾಟವೇ ನಿಂತುಹೋಗುತ್ತದೆ. ಇನ್ನು ಬದುಕುವುದಾದರೂ ಹೇಗೆ ?

*



ಹೇಗಾದರೂ ಚೂರು ಪಾರು ಉಸಿರಾಡುತ್ತಲೇ ಬದುಕುವ ಸಾಧ್ಯತೆಯನ್ನೂ ಇಲ್ಲವಾಗಿಸುವ ಮತ್ತೊಂದು ತೊಡಕು ತಿಮಿಂಗಿಲಗಳ ಕೊಬ್ಬಿನ ಕವಚ. ಕಡಲ ನೀರಲ್ಲಿ ತೇಲುವ ಬಲ ನೀಡುವುದಷ್ಟೇ ಅಲ್ಲದೆ ತಣ್ಣಗಿನ ನೀರಲ್ಲಿ ಶರೀರದ ಉಷ್ಣತೆ ಕಳೆದು ಹೋಗದಂತೆ ತಡೆ ಹಿಡಿವ ಈ ಪದರ ನೆಲದ ಮೇಲೆ ದೇಹ ತಾಪವನ್ನು ತೀರ ಹೆಚ್ಚಿಸುತ್ತದೆ. ಪ್ರಾಣಾಂತಿಕ ಜ್ವರದಂತೆ ಬಿಸಿಯಾಗುವ ಶರೀರ ಹೇಗಾದರೂ ಬಿಸಿ ಇಳಿಸುವ ಯತ್ನದಲ್ಲಿ ತೇವಾಂಶವನ್ನೆಲ್ಲ ಕಳೆದುಕೊಳ್ಳುತ್ತದೆ . ಸ್ವಲ್ಪ ಕಾಲದಲ್ಲೇ ತಿಮಿಂಗಿಲದ ಮೈ ಒಣಗಿ ಹೋಗುತ್ತದೆ. ಮೃತ್ಯು ನಿಶ್ಚಿತವಾಗುತ್ತದೆ.

* ನೆಲದ ಮೇಲೆ ನಿಶ್ಚಲವಾಗಿ ಮೈ ಚೆಲ್ಲುವ ತಿಮಿಂಗಿಲಗಳು ಆಹಾರ ಗಳಿಸಲು ಸಾಧ್ಯವೇ ಇಲ್ಲದೆ ಕ್ಷಿಪ್ರವಾಗಿ ನಿತ್ರಾಣಗೊಳ್ಳುತ್ತವೆ. ಈ ಮೂರೂ ತೊಡಕುಗಳು ಒಟ್ಟಾಗುವುದರಿಂದ ತಿಮಿಂಗಿಲಗಳಿಗೆ ಅಲ್ಪ ಕಾಲದ ನೆಲವಾಸವೂ ಅಸಾಧ್ಯ . ಆದ್ದರಿಂದಲೇ ನೆಲದ ಮೇಲೆ ಅವಕ್ಕೆ ಕ್ಷಿಪ್ರ ಸಾವು ನಿಶ್ಚಿತ .

■ ಎನ್. ವಾಸುದೇವ್